**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 66/2013**

ದಿನಾಂಕಃ 10.01.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 18 ಪ್ರಾಸಾ - 12

| | | |
|---|---|---|
| ಹೆಸರು | ಃ | ಕೆ.ಆರ್.ಅನಂತಕುಮಾರ್ |
| ತಂದೆಯ/ಗಂಡನ ಹೆಸರು | ಃ | ರಾಜಶೇಖರ್ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಸಹಾಯಕ ಅಭಿಯಂತರರು, |
| ವಾಸಸ್ಥಳ | ಃ | ಬೆಂಗಳೂರು |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು 2003 ರಿಂದ 2013 ರವರೆಗೆ ನಾನು ಮಾಗಡಿ ಸಹಾಯಕ ಅಭಿಯಂತರವರ ಕಛೇರಿಯಲ್ಲಿ ಅಭಿಯಂತರನಾಗಿ ಕೆಲಸ ನಿರ್ವಹಿಸಿರುತ್ತೇನೆ.

2. ದಿನಾಂಕ 31.07.2012 ರಂದು ಮಾಗಡಿಯ ಆರಕ್ಷಕ ವೃತ್ತ ನಿರೀಕ್ಷಕರು ಪ್ರಕರಣದ ಕೃತ್ಯ ಸ್ಥಳವಾದ ಸಾವನದುರ್ಗ ಅರಣ್ಯ ಪ್ರದೇಶದ ಬಸವನಬಂಡೆ ಎಂಬ ಸ್ಥಳದ ನಕಾಶೆ ಬರೆದು ನೀಡಲು ಮನವಿ ಮಾಡಿದ್ದರು.

3. ಅದರಂತೆ ದಿನಾಂಕ 03.10.2012 ರಂದು ಪೇದೆ ಸಂಖ್ಯೆ 371 ರವರು ನನ್ನನ್ನು ಕೃತ್ಯದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿರುತ್ತಾರೆ. ಸ್ಥಳವನ್ನು ವೀಕ್ಷಿಸಿದ ನಾನು ನಕಾಶೆಯನ್ನು ಬರೆದು

ನೀಡಿರುತ್ತೇನೆ. ನಾನು ಬರೆದು ನೀಡಿದ ನಕಾಶೆಯನ್ನು ನಿಶಾನೆ ಪಿ12 ಎಂದು ಗುರುತು ಮಾಡಲಾಯಿತು. ನಿಶಾನೆ ಪಿ 12 ರಲ್ಲಿರುವ ನನ್ನ ರುಜುವನ್ನು ನಿಶಾನೆ ಪಿ 12(ಎ) ಎಂದು ಗುರುತು ಮಾಡಲಾಯಿತು. ನಿಶಾನೆ ಪಿ 12 ರ ನಕಾಶೆಯನ್ನು ಸಮುಚಿತ ಮಾರ್ಗದಲ್ಲಿ ತನಿಖಾಧಿಕಾರಿಯವರಿಗೆ ಕಳುಹಿಸಿರುತ್ತೇನೆ.

**<u>ಪಾಟೀ ಸವಾಲುಃ</u> ಶ್ರೀ.ಟಿ.ಜಿ. ವಕೀಲರಿಂದ – ಆರೋಪಿಗಳ ಪರವಾಗಿಃ-**

4. ನಾನು ಉಲ್ಲೇಖಿಸಿದ ಸಾವನದುರ್ಗ ಅರಣ್ಯಪ್ರದೇಶಕ್ಕೆ ಭೇಟಿ ನೀಡದೇ ತನಿಖಾಧಿಕಾರಿಗಳ ಮಾತಿನ ಮುಲಾಜಿಗೆ ಕಛೇರಿಯಲ್ಲಿಯೇ ಕುಳಿತು ನಿಶಾನೆ ಪಿ 12 ನ್ನು ಬರೆದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸೂಚಿಸಿದ ಕಾರಣಕ್ಕೆ ನಾನು ಚಕ್ಕುಬಂದಿ ಗಡಿ ಗುರುತುಗಳ ಬಗ್ಗೆ ನಿಶಾನೆ ಪಿ 12 ರಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.